10ನೇ ತರಗತಿ   ಕನ್ನಡ ರಸಪ್ರಶ್ನೆ  - 04. ಹಕ್ಕಿ ಹಾರುತಿದೆ ನೋಡಿದಿರಾ? [ಪದ್ಯ]  ದಿನಾಂಕ 26-07-2019

1. ಹಕ್ಕಿಯ ಕಣ್ಣುಗಳು ಯಾವುವು?

ಉತ್ತರ:- ಸೂರ್ಯಚಂದ್ರರು

2. ಹಕ್ಕಿಯು ಯಾರನ್ನು ಹರಸಿದೆ?

ಉತ್ತರ:- ಹೊಸಗಾಲದ ಹಸುಮಕ್ಕಳನ್ನು

3 ಹಕ್ಕಿಯು ಯಾರು  ನೆತ್ತಿಯನ್ನು ಕುಕ್ಕಿದೆ?

ಉತ್ತರ:- ಸಾರ್ವಭೌಮರ ನೆತ್ತಿಯನ್ನು

4. ದ. ರಾ. ಬೇಂದ್ರೆಯವರ ಕಾವ್ಯನಾಮ ಯಾವುದು?

ಉತ್ತರ:-  ಅಂಬಿಕಾತನಯದತ್ತ

5. ದ.ರಾ ಬೇಂದ್ರೆಯವರ 'ಅರಳು ಮರಳು' ಕವನಸಂಕಲನಕ್ಕೆ ಯಾವ ಪ್ರಶಸ್ತಿ ದೊರತಿದೆ?

ಉತ್ತರ:- ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

6. ಗರಿ, ಕೃಷ್ಣಕುಮಾರಿ, ಉಯ್ಯಾಲೆ, ಅನಾವರಣ, ಸಖೀಗೀತ,  ನಾದಲೀಲೆ,  ಇವುಗಳಲ್ಲಿ ಗುಂಪಿಗೆ ಸೇರದ ಕೃತಿ ಯಾವುದು?

ಉತ್ತರ:- ಅನಾವರಣ [ಜಿಎಸ್ ಶಿವರುದ್ರಪ್ಪ ನವರ ಕೃತಿ ]

7. ದ. ರಾ. ಬೇಂದ್ರೆಯವರು  ಎಷ್ಟರಲ್ಲಿ ಎಲ್ಲಿ ಜನಿಸಿದರು?

ಉತ್ತರ:- ಕ್ರಿಸ್ತಶಕ 1896ರಲ್ಲಿ ,  ಧಾರವಾಡದ ಸಾಧನಕೇರಿ

8. 'ಹಕ್ಕಿಹಾರುತಿದೆ ನೋಡಿದಿರಾ' ಪದ್ಯವನ್ನು ಬೇಂದ್ರೆಯವರ ಯಾವಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ?

ಉತ್ತರ:- 'ಗರಿ' ಕವನ ಸಂಕಲನ

9. ದ.ರಾ. ಬೇಂದ್ರೆಯವರು  ಎಲ್ಲಿ ಮತ್ತು ಯಾವಾಗ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು ?

ಉತ್ತರ:- 1943 ರಲ್ಲಿ  ಶಿವಮೊಗ್ಗದಲ್ಲಿ ನಡೆದ 27ನೇ

10. ಹಕ್ಕಿಯು ಯಾವ ವೇಗದಲ್ಲಿ ಹಾರುತ್ತಿದೆ?

ಉತ್ತರ:- ಗಾವುದ ವೇಗದಲ್ಲಿ

11. ಬೆಳ್ಳಿ  ;  ಶುಕ್ರ   : ;  ತಿಂಗಳೂರು ; ...................

ಉತ್ತರ:- ಚಂದ್ರಲೋಕ

12. ಯಾವುದಾದರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವಂತಹ ಅವ್ಯಯಗಳಿಗೆ  ಏನನ್ನುವರು?

ಉತ್ತರ:-  ಸಾಮಾನ್ಯಾರ್ಥಕಾವ್ಯಯ

13. ಇರುಳಿರುಳು ;   ದ್ವಿರುಕ್ತಿ  : ;  ಮಂಡಲ ಗಿಂಡಲ ; ...........

ಉತ್ತರ:- ಜೋಡಿ ನುಡಿ

14. ಸಾಕು, ಬೇಡ, ಮೆಲ್ಲಗೆ , ತಟ್ಟನೆ, ಅಯ್ಯೋ, ಅಥವಾ , ನೀನೇ,  ಅವರೇ  ಇವುಗಳಲ್ಲಿ ಸಂಬಂಧಾರ್ಥಕ ಅವ್ಯಯ ಪದ ಯಾವುದು?

ಉತ್ತರ:-  ಅಥವಾ

15. ಹಕ್ಕಿಯು ಯಾವುದರ ಸಂಕೇತವಾಗಿದೆ?

ಉತ್ತರ:-  ಚಲನಶೀಲತೆಯ ಕಾಲದ ಸಂಕೇತವಾಗಿ

16. ದ ರಾ ಬೇಂದ್ರೆ ಅವರ ಜ್ಞಾನಪೀಠ ಪ್ರಶಸ್ತಿ ಪಡೆದ ಕೃತಿ ಯಾವುದು?

ಉತ್ತರ:- 'ನಾಕುತಂತಿ'  ಕವನ ಸಂಕಲನ

17. ಹೊಸಗಾಲ ;   ಆದೇಶ ಸಂಧಿ  : ;    ದಿಗ್ಮಂಡಲ  ;   .....................

ಉತ್ತರ:-   ಜಶ್ತ್ವ ಸಂಧಿ

18. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ?

ಉತ್ತರ:- ಬಿಳಿ-ಹೊಳೆ ಬಣ್ಣದ ಗರಿಗಳಿವೆ

19. 'ಹಕ್ಕಿಹಾರುತಿದೆ ನೋಡಿದಿರಾ?'  ಪದ್ಯದ ಆಧಾರ ಕೃತಿ ಯಾವುದು?

ಉತ್ತರ:- 'ಗರಿ'  ಕವನ ಸಂಕಲನ

20. ಯುಗ ;  ಜುಗ   : ;    ಬ್ರಹ್ಮ   ; ...................

ಉತ್ತರ:- ಬೊಮ್ಮ